**ದಿಃ *12-06-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯ್ತು.**

**ಪಾಟಿ ಸವಾಲುಃ ಶ್ರೀ ಎನ್.ಎಂ.ಜಿ. ಪ್ರತಿವಾದಿಯ ಪರ ವಕೀಲರಿಂದ**

ನಾನು ಹತ್ತನೇ ತರಗತಿಯವರೆಗೆ ಓದಿದ್ದೇನೆ. ವಾದ ಪತ್ರದ ಅಂಶಗಳು ನನಗೆ ಗೊತ್ತು. ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ದಾವೆಯನ್ನು ಸರ್ವೆ ನಂಬರ್ *170/2* ರಲ್ಲಿ *4* ಗುಂಟೆಗೆ ಸಲ್ಲಿಸಲಾಗಿದೆ. ಸರ್ವೆ ನಂಬರ್ *170, 170/2* ಮೂಲತಃ *1* ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. *1* ನೇ ಪ್ರತಿವಾದಿಯು ಸರ್ವೆ ನಂಬರ್ *170/1* ರಲ್ಲಿ ದಿಃ *11-03-1985,* ದಿಃ *14-11-1985* ಮತ್ತು ದಿಃ *25-05-1998* ರಂದು ವಾದಿ ಮತ್ತು ಪ್ರತಿವಾದಿ - *2* ಮತ್ತು *3* ರವರಿಗೆ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆಂದರೆ ಸರಿ. ಸದರಿ ಕ್ರಯ ಪತ್ರಗಳಂತೆ ವಾದಿಗೆ, ಪ್ರತಿವಾದಿ-*2* ಮತ್ತು *3* ರವರಿಗೆ ಖಾತೆ ಆಗಿದೆ ಎಂದರೆ ಸರಿ. ಸರ್ವೆ ನಂಬರ್ *170/1* ಬಿ ರಲ್ಲಿ *1* ನೇ ಪ್ರತಿವಾದಿ ಹೆಸರಿಗೆ *3* ಗುಂಟೆ , ಎಂ.ಆರ್. ನಂಬರ್ *6/11-12* ರಂತೆ ಉಳಿಸಿಕೊಂಡಿರುವ ಸ್ವತ್ತಾಗಿದೆ ಎಂದರೆ ಸರಿ. ಸದರಿ ಸ್ವತ್ತಿಗೆ *1* ನೇ ಪ್ರತಿವಾದಿಯೇ ಮಾಲಿಕನಾಗಿ ಸದರಿ ಸ್ವತ್ತಿನಲ್ಲಿದ್ದಾರೆಂದರೆ ಸರಿ.

ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನಕ್ಕೆ *1* ನೇ ಪ್ರತಿವಾದಿಯು ಎಂದಿಗೂ ಸಹ ತೊಂದರೆ ನೀಡಿಲ್ಲ ಎಂದರೆ ಸರಿ. *1* ನೇ ಪ್ರತಿವಾದಿಯು ನಮಗೆ ಯಾವುದೇ ತೊಂದರೆ ಕೊಡದೇ ಅವರ ವಿರುದ್ಧ ಸುಳ್ಳು ದಾವೆ ಹೂಡಿದ್ದಾರೆಂದರೆ ಸರಿಯಲ್ಲ. *1* ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ *2* ಮತ್ತು *3* ನೇ ಪ್ರತಿವಾದಿಗಳ ಜೊತೆ ಸೇರಿಕೊಂಡು ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಂ.ಕೆ.ಸಿ. *2* ನೇ ಪ್ರತಿವಾದಿಯ ಪರ ವಕೀಲರಿಂದ**

ಕುಮಾರಿ ಎ.ಡಿ.ವಿ., ಶ್ರೀ ಎಂ.ಕೆ.ಸಿ. ಪರವಾಗಿ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಕಾರಣ ಮತ್ತು ದಾವೆಯು ಹಳೆಯ ಪ್ರಕರಣವಾದ ಕಾರಣ ಅವರ ಪ್ರಾರ್ಥನೆ ಯನ್ನು ತಿರಸ್ಕರಿಸಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲುಃ ಶ್ರೀ ಎನ್.ಎಂ.ಜಿ. *3* ನೇ ಪ್ರತಿವಾದಿಯ ಪರ ವಕೀಲರಿಂದ**

ಶ್ರೀ ಎಸ್.ಜೆ.ಜೆ., ಶ್ರೀ ಎನ್.ಎಂ.ಜಿ. ಪರವಾಗಿ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಕಾರಣ ಮತ್ತು ದಾವೆಯು ಹಳೆಯ ಪ್ರಕರಣವಾದ ಕಾರಣ ಅವರ ಪ್ರಾರ್ಥನೆ ಯನ್ನು ತಿರಸ್ಕರಿಸಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

*(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯ್ತು).*

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್. ಸಿ.
ಪಾಂಡವಪುರ.